# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**ಬೆಂಗಳೂರು**

**ಅನುಸೂಚಿ–ಎ 5**

**(ಉಪವಿಧಿ ಸಂಖ್ಯೆ : 4.1)**

**ನಕ್ಷೆ ಮಂಜೂರಾತಿ ಪತ್ರ**

ಕ್ರಮ ಸಂಖ್ಯೆ:ಬೆಂಅಪ್ರಾ/ನಮ/ಅಸ/ಅಅ–3/ತಾಸ–2/ದ/18/2022–23

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು. ದಿನಾಂಕ:**20–08–2022**

ಶ್ರೀಮತಿ/ಶ್ರೀ,

ಮೆ॥ ಶ್ರೀ ವಿಧಾತ್ರಿ ಕನ್ಸ್‌ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್,
ನಂ.12, 1ನೇ ಅಡ್ಡರಸ್ತೆ, ಹುಲಿಮಂಗಲ ಗ್ರಾಮ,
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು,
ಬೆಂಗಳೂರು.

ಮಾನ್ಯರೆ,

ವಿಷಯ :– **ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಾರಗೊಂಡನಹಳ್ಳಿ ಗ್ರಾಮದ ಸರ್ವೆ ನಂ.85/1 ರ 2512.08 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಕಟ್ಟಡದ ನಕ್ಷೆಗೆ ಮಂಜೂರಾತಿ ನೀಡುವ ಕುರಿತು.**

ಉಲ್ಲೇಖ :– ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:3117, ದಿನಾಂಕ:29–07–2022

******

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಾರಗೊಂಡನಹಳ್ಳಿ ಗ್ರಾಮದ ಸರ್ವೆ ನಂ.85/1 ರ 2512.08 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ 1ತಳ+ನೆಲ+03ಮೇಲಂತಸ್ತು+ಮೇಲುಮಹಡಿಯುಳ್ಳ ಒಟ್ಟು 56 ವಸತಿ ಘಟಕಗಳನ್ನೊಳಗೊಂಡ ಕಟ್ಟಡದ ನಕ್ಷೆಗೆ ಮಂಜೂರಾತಿ ನೀಡುವಂತೆ ಕೋರಿರುತ್ತೀರಿ.

ಅದರನ್ವಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರವರು ಆದೇಶ ಸಂಖ್ಯೆ.3117, ದಿನಾಂಕ:29–07–2022 ರಂದು ಸದರಿ ಕಟ್ಟಡದ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ತಾವು ನಕ್ಷೆ ಮಂಜೂರಾತಿ ಶುಲ್ಕಗಳ ಮೊತ್ತವಾದ **ರೂ.20,15,843/– (ಇಪ್ಪತ್ತು ಲಕ್ಷದ ಹದಿನೈದು ಸಾವಿರದ ಎಂಟುನೂರ ನಲವತ್ತೂರು ರೂಪಾಯಿಗಳು ಮಾತ್ರ)** ಗಳನ್ನು ಪ್ರಾಧಿಕಾರದ ಆವರಣದಲ್ಲಿರುವ ಕೆನರಾ ಬ್ಯಾಂಕ್ **ಚಲನ್ ಸಂಖ್ಯೆ:GN22081706, ದಿನಾಂಕ:11-08-2022** ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರಿ. ಆದುದರಿಂದ, ಮಾರಗೊಂಡನಹಳ್ಳಿ ಗ್ರಾಮದ ಸರ್ವೆ ನಂ.85/1 ರ 2512.08 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಈ ಕೆಳಕಂಡಂತೆ ನಿರ್ಮಿಸಲು ಉದ್ದೇಶಿಸಿರುವ ;

| ಕಟ್ಟಡದ ವಿವರ | ಅಂತಸ್ತುಗಳ ವಿವರ | ವಸತಿ ಘಟಕಗಳ ಸಂಖ್ಯೆ |
|---|---|---|
| ವಸತಿ ಕಟ್ಟಡ | 1ತಳ+ನೆಲ+03ಮೇಲಂತಸ್ತು+ಮೇಲುಮಹಡಿ | 56 |

ವಸತಿ ಕಟ್ಟಡದ ನಕ್ಷೆಗೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ಮಂಜೂರಾತಿ ನೀಡಲಾಗಿದೆ. **ಈ ನಕ್ಷೆ ಮಂಜೂರಾತಿಯು ದಿನಾಂಕ:20-08-2022 ರಿಂದ ದಿನಾಂಕ:19-08-2024 ರವರೆಗೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ** ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

## ಪಾಲಿಸಬೇಕಾದ ಷರತ್ತುಗಳು

1. ಕಟ್ಟಡ ಕೆಲಸ ಪ್ರಾರಂಭಿಸುವ ಮುನ್ನ ಕಾರ್ಮಿಕರಿಗೆ ತಾತ್ಕಾಲಿಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸುವುದು ಮತ್ತು ನಿರ್ವಹಿಸಿ ಶುಚಿತ್ವವನ್ನು ಕಾಪಾಡುವುದು.
2. ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯಂತೆಯೇ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಮಂಜೂರಾತಿಯಾದ ಕಟ್ಟಡ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ಉಲ್ಲಂಘಿಸಿದಲ್ಲಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

...2/-

3. ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ (NOC) ಪತ್ರಗಳನ್ನು ಪಡೆದು ಪ್ರಾರಂಭಿಕ ಪ್ರಮಾಣ ಪತ್ರಕ್ಕಾಗಿ ಮನವಿ ಮಾಡುವ ಸಮಯದಲ್ಲಿ ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
4. ಪ್ರಾಧಿಕಾರದಿಂದ ಕಟ್ಟಡ ಪ್ರಾರಂಭಿಸುವ ಪೂರ್ವದಲ್ಲಿ ಅರ್ಜಿ ಸಲ್ಲಿಸಿ ಪ್ರಾರಂಭ ಮಾಡಲು ಸೂಕ್ತ ಅನುಮತಿ ಪತ್ರ ಪಡೆಯತಕ್ಕದ್ದು.
5. ಅರ್ಜಿದಾರರು ಕಾಮಗಾರಿ ಪ್ರಾರಂಭಿಸುವುದಕ್ಕಿಂತ ಮೊದಲು ಬಿಬಿಎಂಪಿಗೆ ಬಾಕಿ ತೆರಿಗೆಗಳೇನಾದರೂ ಇದ್ದಲ್ಲಿ ಪಾವತಿಸುವುದು.
6. ಕಾಮಗಾರಿ ಪ್ರಾರಂಭಿಸುವುದಕ್ಕಿಂತ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಖಾತಾ ಪತ್ರ ಪಡೆಯುವುದು.
7. ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅರ್ಜಿದಾರರದ್ದೇ ಆಗಿರುತ್ತದೆ.
8. ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಛಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.
9. KSPCB ಇಲಾಖೆಯಿಂದ ನೀಡಿರುವ ನಿರಾಕ್ಷೇಪಣಾ ಪತ್ರಗಳಲ್ಲಿನ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.
10. ಕುಡಿಯುವ ಹಾಗೂ ಬಳಸುವ ನೀರಿಗಾಗಿ ಪ್ರತ್ಯೇಕ ಪೈಪ್ ಲೈನುಗಳನ್ನು ಅಳವಡಿಸುವುದು.
11. ಕಟ್ಟಡದ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/-ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 1% ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಸತಕ್ಕದ್ದು.
12. ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.
13. ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿಗಳನ್ನು ಸಂಗ್ರಹಿಸಿ Drywaste ಮತ್ತು Wetwaste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.
14. ಪೂರ್ಣಗೊಂಡ ಕಟ್ಟಡವನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
15. ನಿವೇಶನದ ಸುತ್ತಳತೆಯಲ್ಲಿ ಎರಡು ಹಸಿರು ಸಸಿಗಳನ್ನು ನೆಡುವುದು.
16. ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.
17. ಅರ್ಜಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗಧಿಪಡಿಸಿದ ಹಣವನ್ನು ಸಂದಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.
18. ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
19. ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.
20. ಅಭಿವೃದ್ಧಿದಾರರು ಯೋಜನೆಯ ಒಳಾಂಗಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
21. ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದ ನೀಡುವ 45727-45730/2011(ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

. . .3/-

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

22. ಅರ್ಜಿದಾರರು ನಕ್ಷೆ ಮಂಜೂರಾತಿಗಾಗಿ ಯಾವುದೇ ತಪ್ಪು ದಾಖಲೆಗಳನ್ನೇನಾದರು ಸಲ್ಲಿಸಿರುವುದು ಕಂಡುಬಂದಲ್ಲಿ ಮಂಜೂರಾದ ನಕ್ಷೆಯು ತನ್ನಿಂತಾನೆ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗುವುದು.
23. ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.
24. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು (NGT) ಆಗಿಂದಾಗ್ಗೆ ಹೊರಡಿಸುವ ಯಾವುದೇ ಮಾರ್ಗಸೂಚಿ / ನಿರ್ದೇಶನಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
25. ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ:PCB/031/C&D/2016/5392/2020-21 ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೆ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು.
26. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

ಆಯುಕ್ತರ ಪರವಾಗಿ
ಮಂಜೂರಾತಿ ನೀಡುವವರ ಸಹಿ ಮತ್ತು
ಹುದ್ದೆಯ ಹೆಸರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪ್ರತಿಯನ್ನು:-

ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.